ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 18/6/2020

# ವಿಶ್ವನಾಥ್‌ಗೆ ತಪ್ಪಿದ ಬಿಜೆಪಿ ಟಿಕೆಟ್

## ಎಂಟಿಬಿ, ಶಂಕರ್, ಸುನೀಲ್, ನಾಯಕ್‌ಗೆ ಟಿಕೆಟ್

ಬೆಂಗಳೂರು: ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಬಿಜೆಪಿಯು ಬುಧವಾರತಡರಾತ್ರಿ ಅಭ್ಯರ್ಥಿಗಳನ್ನು ಪ್ರಕಟಿಸಿದೆ. ಶಿಫಾರಸ್ಸಾಗಿದ್ದ 4 ಹೆಸರು ಪೈಕಿ ಮೂರಕ್ಕೆ ಹೈಕಮಾಂಡ್ ಅಸ್ತು ಎಂದಿದ್ದು ಮತ್ತೊಂದು ಅಚ್ಚರಿ ಅಭ್ಯರ್ಥಿ ಘೋಷಿಸಿದೆ. ಎಂಟಿಬಿ ನಾಗರಾಜ್, ಶಂಕರ್ ಮತ್ತು ಸುನೀಲ್ ವಲ್ಯಾಪುರೆ ಅವರಿಗೆ ಟಿಕೆಟ್ ಲಭಿಸಿದೆ. ಆದರೆ ಚುನಾವಣೆಯಲ್ಲಿ ಸೋತಿದ್ದ ಮೈಸೂರಿನ ಎಚ್.ವಿಶ್ವನಾಥ್ ಅವರಿಗೆ ಟಿಕೆಟ್ ತಪ್ಪಿದೆ. ಇವರ ಬದಲು ಪ್ರತಾಪ್‌ಸಿಂಹ ನಾಯಕ್ ಅವರಿಗೆ ಲಭಿಸಿದೆ.

ವಿವರ ► 9

# ಮೇಲ್ಮನೆ: ವಿಶ್ವನಾಥ್‌ಗೆ ಸಿಗಲಿಲ್ಲ ಬಿಜೆಪಿ ಟಿಕೆಟ

## ಎಂಟಿಬಿ, ಶಂಕರ್, ಸುನಿಲ್ ವಲ್ಯಾಪುರೆಗೆ ಪರಿಷತ್ ಟಿಕೆಟ್ | ಪ್ರತಾಪಸಿಂಹ ನಾಯಕ್ ಅಚ್ಚರಿಯ ಅಭ್ಯರ್ಥಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ವಿಧಾನಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಸುವ ಹಿಂದಿನ ದಿನವಾದ ತಡರಾತ್ರಿ ಆಡಳಿತಾರೂಢ ಬಿಜೆಪಿ ತನ್ನ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸಿದ್ದು, ಜೆಡಿಎಸ್‌ನಿಂದ ವಲಸೆ ಬಂದಿದ್ದ ಎಚ್.ವಿಶ್ವನಾಥ್ ಅವರಿಗೆ ಅವಕಾಶ ನಿರಾಕರಿಸಿದೆ.


ಎಚ್.ವಿಶ್ವನಾಥ್

ಇನ್ನುಳಿದಂತೆ ಕಾಂಗ್ರೆಸ್‌ನಿಂದ ವಲಸೆ ಬಂದಿದ್ದ ಎಂ.ಟಿ.ಬಿ. ನಾಗರಾಜ್, ಕ್ಷೇತ್ರ ತ್ಯಾಗ ಮಾಡಿದ್ದ ಎಸ್. ಶಂಕರ್, ಮಾಜಿ ಶಾಸಕ ಸುನೀಲ್ ವಲ್ಯಾಪುರೆ ಹಾಗೂ ಸಂಘ ಪರಿವಾರ ಮೂಲದ ತಳಮಟ್ಟದ ಕಾರ್ಯಕರ್ತ ಪ್ರತಾಪ್ ಸಿಂಹ ನಾಯಕ್ ಅವರಿಗೆ ಟಿಕೆಟ್ ನೀಡಿದೆ.

ರಾಜ್ಯಸಭಾ ಚುನಾವಣೆಯಂತೆ ವಿಧಾನಪರಿಷತ್ ಚುನಾವಣೆಯಲ್ಲೂ ಕಾರ್ಯಕರ್ತರಿಗೆ ಟಿಕೆಟ್ ನೀಡುವ ಮೂಲಕ ಸೂಕ್ತ ಸ್ಥಾನಮಾನ ಕಲ್ಪಿಸಲಾಗುವುದು ಎಂಬ ಸಂದೇಶವನ್ನು ರವಾನಿಸುವಲ್ಲಿ ಹೈಕಮಾಂಡ್ ಯಶಸ್ವಿಯಾಗಿದೆ.

ಬುಧವಾರ ಮಧ್ಯರಾತ್ರಿ 12ಗಂಟೆಗೆ ತನ್ನ ಅಭ್ಯರ್ಥಿ ಪ್ರಕಟಿಸಿರುವ ಬಿಜೆಪಿ ಹೈಕಮಾಂಡ್ ಕೊನೆಯ ಕ್ಷಣದವರೆಗೂ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ರಾಜ್ಯ ನಾಯಕರ ಜೊತೆ ಚರ್ಚೆ, ಸಂವಾದ ನಡೆಸಿದೆ. ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಹಿಡಿದ ಪಟ್ಟಿನಿಂ ದಾಗಿ ನಾಗರಾಜ್, ಶಂಕರ್ ಹಾಗೂ ವಲ್ಯಾಪುರೆ ಅವರಿಗೆ ಟಿಕೆಟ್ ಸಿಕ್ಕಿದೆ. ಆದರೆ, ವಿಶ್ವನಾಥ್ ಪರ ಯಡಿ ಯೂರಪ್ಪ ಅವರು ಬಲವಾದ ಲಾಬಿ ನಡೆಸಿದರೂ ವರಿಷ್ಠರು ಸಹಮತ ಸೂಚಿಸಲಿಲ್ಲ.

ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ತರಲು ಕಾರಣಕರ್ತರಾಗಿದ್ದ ಎಂ.ಟಿ.ಬಿ.ನಾಗರಾಜ್, ಆರ್.ಶಂಕರ್, ಎಚ್.ವಿಶ್ವನಾಥ್ ಹಾಗೂ ಚಿಂಚೋಳಿ ವಿಧಾನ ಸಭಾ ಕ್ಷೇತ್ರವನ್ನು ಬಿಟ್ಟುಕೊಟ್ಟಿರುವ ಪಕ್ಷದ ಮಾಜಿ ಶಾಸಕ ಸುನೀಲ್ ವಲ್ಯಾಪುರೆ ಅವರನ್ನು ಅಭ್ಯರ್ಥಿಗಳನ್ನಾಗಿಸುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಪಕ್ಷದ


ಎಂಟಿಬಿ ನಾಗರಾಜ್


ಸುನೀಲ್ ವಲ್ಯಾಪುರೆ


ಆರ್.ಶಂಕರ್


ಪ್ರತಾಪ್‌ಸಿಂಹ ನಾಯಕ್

ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಮತ್ತಿತರ ಹಿರಿಯ ನಾಯಕರನ್ನು ಒಳಗೊಂಡ ಕೋರ್ ಕಮಿಟಿ ಸಭೆಯಲ್ಲಿ ನಿರ್ಧರಿಸಿ ಪಕ್ಷದ ವರಿಷ್ಠರಿಗೆ ತಲುಪಿಸಲಾಗಿತ್ತು.

ಆದರೆ, ಶಂಕರ್ ಅವರನ್ನು ಹೊರತುಪ
ಇನ್ನುಳಿದವರಿಗೆ ಟಿಕೆಟ್ ನೀಡಲು ಬಿ
ವರಿಷ್ಠರು ತಕರಾರು ಎತ್ತಿದರೂ ಮುಖ್ಯಮ
ಯಡಿಯೂರಪ್ಪ ಅವರು ಮಾತ್ರ ತಮ್ಮ ಪ
ಸಡಿಲಿಸಲಿಲ್ಲ. ಅಂತಿಮವಾಗಿ ವಿಶ್ವನಾಥ್ ಅವ
ರನ್ನು ಹೊರತುಪಡಿಸಿ ಇನ್ನುಳಿದ ಮೂವ
ಟಿಕೆಟ್ ನೀಡಲು ವರಿಷ್ಠರು ಒಪ್ಪಿಕೊಂಡ
ಆದರೆ ಇದೀಗ ವಿಶ್ವನಾಥ್ ಅವರನ್ನು
ಯಡಿಯೂರಪ್ಪ ಅವರು ಹೇಗೆ ಸಮಾಧ
ಪಡಿಸುತ್ತಾರೆ ಎಂಬುದು ಕುತೂಹಲ ಮೂಡಿ
ವಿಶ್ವನಾಥ್ ಬದಲು ದಕ್ಷಿಣ ಕನ್ನಡ ಬಿ
ಮುಖಂಡ, ಸಂಘ ಪರಿವಾರ ಹಿನ್ನೆಲೆಯ ಕೋ
ಸಮುದಾಯಕ್ಕೆ ಸೇರಿದ ಪ್ರತಾಪ್ ಸಿ
ನಾಯಕ್‌ರನ್ನು ಅಭ್ಯರ್ಥಿಯನ್ನಾಗಿಸಲಾಗಿ

**ನೋ ಕಮೆಂಟ್ಸ್ ಎಂದ ವಿಶ್ವನಾಥ್**: ತ
ಟಿಕೆಟ್ ತಪ್ಪಿದ್ದಕ್ಕೆ ಪ್ರತಿಕ್ರಿಯೆ ನೀಡಲು ಎ
ವಿಶ್ವನಾಥ್ ಅವರು ನಿರಾಕರಿಸಿದ್ದಾರೆ. ದೂರವ
ಮೂಲಕ 'ಕನ್ನಡಪ್ರಭ' ಸಂಪರ್ಕಿಸಿದಾಗ, 'ನ
ಕಮೆಂಟ್ಸ್' ಎಂದು ಸುಮ್ಮನಾದರು.